## ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 71/2022

ಚಾ.ಸಾಃ 10 ಫ್ರಾ.ಸಾಃ 06

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 18.08.2025

| | | |
|---|---|---|
| ಸಾಕ್ಷಿಯ ಹೆಸರು | : | ನರಸಿಂಹಲು |
| ತಂದೆಯ ಹೆಸರು | : | ತಿಮ್ಮಪ್ಪ |
| ವಯಸ್ಸು | : | 23 ವರ್ಷ |
| ಉದ್ಯೋಗ | : | ಕೂಲಿ |
| ವಿಳಾಸ | : | ರಾಯಚೂರು |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ.11 – ಮುರಳಿಕೃಷ್ಣ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಮಹಜರನ್ನು ಮಾಡಿಲ್ಲ ಮತ್ತು ಟ್ರಾಕ್ಟರ್ ಇಂಜಿನನ್ನು ಜಪ್ತಿ ಮಾಡಿಲ್ಲ. ಸಾಕ್ಷಿಯು ಗುರುತಿಸಿದ ಟ್ರಾಕ್ಟರ ಜಪ್ತಿ ಮಹಜರನ್ನು **ನಿಪಿ.8** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.8(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಎರಡು ಪೋಟೋಗಳನ್ನು **ನಿಪಿ.8(ಬಿ) ಮತ್ತು (ಸಿ) ಎಂದು ಸರ್ಟಿಫಿಕೇಟ್ ಹಾಜರು ಪಡಿಸುವ ಷರತ್ತಿನ ಮೇರೆಗೆ ಗುರುತಿಸಲಾಯಿತು**.

02. ಪೊಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆಂದು ನನಗೆ ಗೊತ್ತಿಲ್ಲ. ನಿಪಿ.8 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಸಲಾಯಿತು)

SC No.71/2022
CW-10 / PW-06

**ಮಾನ್ಯ ಸರಕಾರಿ ಅಭಿಯೋಜಕರಿಂದ ಪಾಟೀ ಸವಾಲುಃ-**

03. ದಿನಾಂಕ 19.07.2021 ರಂದು ನನ್ನ ಮತ್ತು ಚಾಸಾ-11 ರವರ ಸಮಕ್ಷಮ ಪೋಲಿಸರು ನಿಪಿ.8 ರ ಪ್ರಕಾರ ಮಹಜರ ಮಾಡಿದರು ಮತ್ತು ಚಾಸಾ-20 ಇವರು ಹಾಜರು ಪಡಿಸಿದ ಒಂದು ಟ್ರಾಕ್ಟರ್ ಇಂಜನನ್ನು ಜಪ್ತಿ ಪಡಿಸಿಕೊಂಡರು ಎನ್ನುವುದು ಸರಿಯಲ್ಲ. ಆಗ ನಿಪಿ.8(ಬಿ) ಮತ್ತು (ಸಿ) ಪೋಟೋಗಳನ್ನು ತೆಗೆದರು ಎನ್ನುವುದು ಸರಿಯಲ್ಲ.

04. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆಂದರೆ ಸರಿಯಲ್ಲ.

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.